ಉತ್ತರಿಸುತ್ತಾ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತ್ರರಿಂದ 5 ಕೊಠಡಿಗಳ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಕೇಳಲಾಗಿದ್ದು ಅವರು ಕಳುಹಿಸಿಕೊಟ್ಟಿದ್ದಾರೆಂದು ತಿಳಿಸಿರುತ್ತಾರೆ. ಇದು ಯಾವ ವರ್ಷದಲ್ಲಿ ಕಳುಹಿಸಿಕೊಟ್ಟಿದ್ದಾರೆ ? ಎಷ್ಟು ಅಂದಾಜು ಹಣವನ್ನು ಕೊಟ್ಟಿದ್ದಾರೆ ? ಏತಕ್ಕೋಸ್ಕರವಾಗಿ ಇಷ್ಟೊಂದು ವಿಳಂಬವಾಗುತ್ತಿದೆ ? ಇಷ್ಟೊಂದು ತೊಂದರೆ ಇದ್ದರೂ ಈ ವರ್ಷದ ಬಡ್ಜೆಟಿನಲ್ಲಿ ಏತಕ್ಕೆ ಸೇರಿಸಿಲ್ಲ ? ನಮ್ಮ ತಾಲ್ಲೂಕು ಹಿಂದುಳಿದ ತಾಲ್ಲೂಕು ಎನ್ನುವುದು ಸಚಿವರಿಗೂ ತಿಳಿದಿರತಕ್ಕಂಥ ವಿಷಯವಾಗಿದ್ದರೂ, ಅವರೂ ಕೂಡ ಹಿಂದುಳಿದವರಾಗಿದ್ದರೂ ಏತಕ್ಕೆ ಇಷ್ಟೊಂದು ವಿಳಂಬಮಾಡುತ್ತಿದ್ದಾರೆಂದು ಕೇಳುತ್ತೇನೆ ? ಈಗಲಾದರೂ ಕೊಠಡಿಗಳ ಕೊರತೆಯನ್ನು ನೀಗಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಈ ಸಾರಿ 5 ಕೊಠಡಿಗಳನ್ನು ಕಟ್ಟಿಸಿಕೊಡುವುದಕ್ಕೆ ಲೋಕೋಪಯೋಗಿ ಇಲಾಖೆಯವರಿಗೆ ಹೇಳಿದ್ದೇನೆ. ಈ ಕಟ್ಟಡವನ್ನು ಕಟ್ಟಿಸುವ ಸಲುವಾಗಿ ಶ್ರೀಮತಿ ಮರಿಯಮ್ಮನವರು 20 ಸಾವಿರ ರೂಪಾಯಿಗಳ ಧನಸಹಾಯವನ್ನು ಏನು ಮಾಡಿರುತ್ತಾರೆ ಅದನ್ನು ನಮ್ರತೆಯಿಂದ ಸ್ವೀಕರಿಸಿ, ಆ ಹಣವನ್ನು ಸದುಪಯೋಗ ಪಡಿಸಿಕೊಳ್ಳಲು ಪ್ರಯತ್ನಮಾಡುತ್ತೇನೆ.

ವಿಷಯ :– ಬೆಳಗಾಂನಲ್ಲಿರುವ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ನಡಸಲಾಗುತ್ತಿರುವ ತರಗತಿಗಳು.

ಪ್ರ. ಸಂ. 605(1543) ಶ್ರೀ ಆರ್. ಸಿ. ಬಾಳೀಕುಂದರಗಿ (ಬೈಲಹೊಂಗಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆವಿಟ್ಟು ಉತ್ತರಿಸುವರೆ :–

ಅ. ಬೆಳಗಾಂ ಜಿಲ್ಲೆಯಲ್ಲಿನ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಅನೇಕ ವರ್ಷಗಳಿಂದ ಬೆಳಗ್ಗೆ ಹಾಗೂ ಸಂಜೆ ತರಗತಿಗಳನ್ನು ನಡೆಸುತ್ತಿದ್ದುದು ನಿಜವಲ್ಲವೇ ;

ಆ. ಕೆಲವು ಸಮಯದಿಂದ ಈ ವಿಧಾನವನ್ನು ಬದಲಾಯಿಸಿರುವುದು ನಿಜವೇ ;

ಇ. ಇದರಿಂದಾಗಿ ಶಾಲೆಯ ಮಕ್ಕಳಿಗೆ ತೊಂದರೆಯಾಗಿರುವುದು ಸರಕಾರದವರಿಗೆ ಗೊತ್ತಿದೆಯೇ;

ಈ. ಹಾಗಿದ್ದಲ್ಲಿ, ಈ ವಿಧಾನವನ್ನು ಬದಲಾಯಿಸಿ ಮೊದಲು ನಡೆಯುತ್ತಿದ್ದಂತೆಯೇ ತರಗಳನ್ನು ನಡೆಸುವಂತೆ ಮಾಡಲು ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) :–

ಅ. ಹೌದು.

ಆ. ಹೌದು.

ಇ. ಇದುವರೆಗೂ ಯಾವ ದೂರೂ ಬಂದಿಲ್ಲ.

ಈ. ಬೇಡಿಕೆ ಬಂದಲ್ಲಿ ಪರಿಗಣಿಸಲಾಗುವುದು.

ವಿಷಯ :– ಬೀರೂರಿನ ಸರ್ಕಾರಿ ಬಾಲಕೀಯರ ಪ್ರೌಢಶಾಲೆಯ ಕಟ್ಟಡವನ್ನು ದುರಸ್ತಿಗೊಳಿಸುವುದು.

ಪ್ರ. ಸಂ. 606 (1574) ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬಿರೂರು).–ಮಾನ್ಯ ಶಿಕ್ಷಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ. ಬೀರೂರಿನಲ್ಲಿರುವ ಸರ್ಕಾರಿ ಬಾಲಕಿಯರ ಮಾಧ್ಯಮಿಕ ಶಾಲೆ ಮತ್ತು ಸರ್ಕಾರಿ ಬಾಲಕರ ಪ್ರಾಥಮಿಕ ಶಾಲಾ ಕಟ್ಟಡಗಳು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ. ಹಾಗಿದ್ದಲ್ಲಿ, ಮುಂದಿನ ಶೈಕ್ಷಣಿಕ ವರ್ಷ ದೊಳಗಾಗಿ ಆ ಕಟ್ಟಡಗಳನ್ನು ರಿಪೇರಿ ಮಾಡಿಸಲು ಸರ್ಕಾರ ಕ್ರಮಕ್ಕೆಗೊಳ್ಳುವುದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) :–

ಅ. ಹೌದು.

ಆ. ಲೋಕೋಪಯೋಗಿ ಇಲಾಖೆಯವರನ್ನು ತುರ್ತು ರಿಪೇರಿ ಕೈಗೊಳ್ಳಲು ಕೋರಲಾಗಿದೆ.

---

* ಮಾನ್ಯ ಸದಸ್ಯರು ಹಾಜರಿರಲಿಲ್ಲ

ವಿಷಯ :– ಸಿಂಧನೂರಿನಲ್ಲಿ ಕೃಷಿ ಕಾಲೇಜಿನ ಸ್ಥಾಪನೆ.

ಪ್ರ. ಸಂ. 607 (1619) ಶ್ರೀ ಎಂ. ಮಲ್ಲಪ್ಪ (ಸಿಂಧನೂರು)*.--ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ತೀವ್ರ ವ್ಯವಸಾಯ ಅಭಿವೃದ್ಧಿ ಜಿಲ್ಲೆಯ ಕೇಂದ್ರ ಸ್ಥಳವಾದ ಸಿಂಧನೂರಿನಲ್ಲಿ ಕೃಷಿ ಮಹಾ ವಿದ್ಯಾಲಯವನ್ನು ಸ್ಥಾಪಿಸುವ ಸಲಹೆ ಸರ್ಕಾರದವರ ಪರಿಶೀಲನೆಯಲ್ಲುದೆಯೇ :

ಆ. ಹಾಗಿಲ್ಲದಿದ್ದಲ್ಲಿ ಈ ಮಹಾ ವಿದ್ಯಾಲಯವನ್ನು ಸ್ಥಾಪಿಸುವ ನಿರ್ಧಾರ ಕೈಗೊಳ್ಳಲು ಇರುವ ತೊಂದರೆಗಳಾವುವು?

ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು) :––

ಅ. ಇಲ್ಲ.

ಆ. ಡಾ॥ ಜಿ. ವಿ.ಕೆ. ರಾವ್ ಸಮಿತಿಯ ಅಂತಿಮ ವರದಿ ಬಂದಮೇಲೆ ತೀರ್ಮಾನಿಸಲಾಗುವುದು.

ವಿಷಯ :– ಬೀದರಿನ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಕಟ್ಟಡವನ್ನು ದುರಸ್ತಿಗೊಳಿಸುವುದು.

ಪ್ರ. ಸಂ. 606 (1574) ಶ್ರೀ ಎಸ್.ಆರ್. ಲಕ್ಷ್ಮಯ್ಯ (ಬಿರೂರ್).--ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ. ಬೀರೂರಿನಲ್ಲಿರುವ ಸರ್ಕಾರಿ ಬಾಲಕಿಯರ ಮಾಧ್ಯಮಿಕ ಶಾಲೆ ಮತ್ತು ಸರ್ಕಾರಿ ಬಾಲಕರ ಪ್ರಾಥಮಿಕ ಶಾಲಾ ಕಟ್ಟಡಗಳು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ. ಹಾಗಿದ್ದಲ್ಲಿ, ಮುಂದಿನ ಶೈಕ್ಷಣಿಕ ವರ್ಷದೊಳಗಾಗಿ ಆ ಕಟ್ಟಡಗಳನ್ನು ರಿಪೇರಿ ಮಾಡಿಸಲು ಸರ್ಕಾರ ಕ್ರಮಕ್ಕೈಗೊಳ್ಳುವುದೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) :––

ಅ. ಹೌದು.

ಆ. ಲೋಕೋಪಯೋಗಿ ಇಲಾಖೆಯವರನ್ನು ತುರ್ತು ರಿಪೇರಿ ಕೈಗೊಳ್ಳಲು ಕೋರಲಾಗಿದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ, ಬೀರೂರ್ ಪಟ್ಟಣದಲ್ಲಿರತಕ್ಕಂಥ ಸರ್ಕಾರಿ ಬಾಲಕಿಯರ ಮಾಧ್ಯಮಿಕ ಶಾಲೆ ಹಾಗೂ ಸರ್ಕಾರಿ ಬಾಲಕರ ಪ್ರಾಥಮಿಕ ಶಾಲೆಗಳ ಕಟ್ಟಡಗಳು ಬಹಳ ದುಸ್ಥಿತಿಯಲ್ಲಿದ್ದು ಈವತ್ತಿನ ದಿವಸ ಮಕ್ಕಳು ಕುಳಿತು ವ್ಯಾಸಂಗ ಮಾಡುವ ಸ್ಥಿತಿಯಲ್ಲಿಲ್ಲ, ಇದಕ್ಕೆ ವಾರ್ಷಿಕ ರಿಪೇರಿಗಳಾಗಿ ಎಂಟು ವರ್ಷಗಳು ಆಗಿರುತ್ತದೆ, ಇದು ವಿದ್ಯಾ ಇಲಾಖೆಗೆ ಸಂಬಂಧಪಟ್ಟಿರುವುದರಿಂದ ಪಿ. ಡಬ್ಲ್ಯೂ. ಡಿ. ಇಲಾಖೆಯವರು ಗ್ಯಾರಂಟಿ ಕೊಟ್ಟಿಲ್ಲವೆಂದು ಹೇಳುತ್ತಾರೆ. ಇದು ಒಂದು ಮಹತ್ತರವಾದ ವಿಷಯವೆಂದು ತಿಳಿದು ಸರ್ಕಾರದವರು ಈಗಲಾದರೂ ವಾರ್ಷಿಕ ರಿಪೇರಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಇನ್ನು ಎರಡು ಮೂರು ತಿಂಗಳಲ್ಲಿಯೇ ಮಳೆಗಾಲ ಪ್ರಾರಂಭವಾಗುವುದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಪ್ರಾಥಮಿಕ ಶಾಲೆಗಳ ಮತ್ತು ಮಾಧ್ಯಮಿಕ ಶಾಲೆಗಳ ರಿಪೇರಿಗೋಸ್ಕರವಾಗಿ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಗೆ ಮೂವತ್ತು ಸಹಸ್ರ ರೂಪಾಯಿಗಳನ್ನು ಈ ವರ್ಷದಲ್ಲಿ ಕೊಟ್ಟಿರುತ್ತೇವೆ. ಪಿ. ಡಬ್ಲ್ಯೂ. ಡಿ. ಎಕ್ಸಿಕ್ಯುಟೀವ್ ಇಂಜಿನಿಯರ್‌ರವರನ್ನು ದಯವಿಟ್ಟು ಮಾನ್ಯ ಸದಸ್ಯರು ಕಾಂಟಾಕ್ಟ್ ಮಾಡಬೇಕೆಂದ ಹೇಳುತ್ತೇನೆ.

---

* ಮಾನ್ಯ ಸದಸ್ಯರು ಹಾಜರಿರಲಿಲ್ಲ